ಮೇಲೊಂದು ನೆನಪಿಟ್ಟುಕೊಳ್ಳಲಾಗದಷ್ಟು ಸಣ್ಣ ಗಾಯದ ಗುರುತು ತನ್ನ ಮತ್ತು ಬಂದಾತನ ನಡುವಿನ ವ್ಯತ್ಯಾಸಗಳನ್ನು ಪಟ್ಟಿಮಾಡಲು ಪ್ರಯತ್ನಿಸುತ್ತ ಹೋದಂತೆ, ಆ ಎಲ್ಲ ವ್ಯತ್ಯಾಸಗಳೂ ಕಡಿಮೆಯಾಗುತ್ತ ಹೋಗಿ ಶಮಿ ಬೆವರತೊಡಗಿದ. ತಾನು ಕೊನೆಯಬಾರಿ ತನ್ನ ಸ್ವಂತ ಮುಖ ನೋಡಿದ್ದು ಯಾವಾಗ ಎಂದು ನೆನಪಾಗಲಿಲ್ಲ. ಕಾರ್ಲಿತೋನ ಗಮನಕ್ಕೆ ಈ ವಿಚಿತ್ರ ಹೇಗೆ ಬಾರದೇ ಹೋಯಿತು? ಅಥವಾ ಅದನ್ನು ಗಮನಿಸಿಯೇ ಈ ಮನೆಗೆ ಕರೆತಂದನೇ? "ಆ ಮನೆಯ ಓನರ್ ನಿನ್ನಂತಹುದೇ ಒಬ್ಬ ಇಂಡಿಯನ್, ಯಾಕಯ್ಯ ಹೆದರುತ್ತಿ?" ಎಂದುದರ ಹಿಂದಿನ ಮರ್ಮ ಇಷ್ಟು ವಿಚಿತ್ರವಾಗಿರುತ್ತದೆಂದು ನಂಬಲಾಗಲಿಲ್ಲ. ಕ್ಲಾಸೆಟ್ಟಿನಿಂದ ಹೊರಜಿಗಿದು ಅಸಂಬದ್ಧವನ್ನು ಅಲುಗಾಡಿಸಲೆ? ಆಗಲೇ ಬಾತ್‌ರೂಮಿನ ಕನ್ನಡಿಯ ಮುಂದೆ ನಿಂತು ತನ್ನ ಬಿಂಬದೊಡನೆ ಮಾತನಾಡುತ್ತಿದ್ದ ವಿಚಿತ್ರವನ್ನು ಎದುರಿಸುವ ಧೈರ್ಯ ಬರಲಿಲ್ಲ. ತಾನೇ ಅಭಿನಯಿಸುತ್ತಿದ್ದ ನಾಟಕವೊಂದನ್ನು ಸೈಡ್‌ವಿಂಗಿನಲ್ಲಿ ನಿಂತು ನೋಡುತ್ತಿದ್ದಂತೆನಿಸಿತು.

ಬಂದಾತ ತನ್ನ ಪ್ಯಾಂಟ್‌ಶರ್ಟ್ ಕಳಚಿ ಇಸ್ತ್ರಿ ಹಾಕಿದ ಹಾಗೆ ಮಡಚಿ, ಲಾಂಡ್ರಿ ಬಾಸ್ಕೆಟಿನಲ್ಲಿಟ್ಟ. ಸ್ವಲ್ಪಹೊತ್ತು ಕನ್ನಡಿಯ ಮುಂದೆ ನಿಂತು, ಹುಬ್ಬು ತೀಡಿ, ಮೀಸೆ ಕತ್ತರಿಸಿ, ನುಣುಪಿದ್ದ ಗಲ್ಲವನ್ನು ಇನ್ನಷ್ಟು ಕೆರೆದು ವಿವಿಧ ಭಂಗಿಗಳಲ್ಲಿ ನಿಂತು ನೋಡಿಕೊಂಡ. ತನ್ನ ಈ ಬಾತ್‌ರೂಮನ್ನು ನೋಡಲು ಜಗತ್ತೇ ಬರಲಿದೆ ಎನ್ನುವ ರೀತಿಯಲ್ಲಿ ಅಲ್ಲಿನ ಎಲ್ಲವನ್ನೂ ಎಲ್ಲವನ್ನೂ ಹೊಂದಿಸಿಟ್ಟ. ಕನ್ನಡಿಯ ಹಿಂದೆ ಅವಿತಿದ್ದ ಅತ್ತರಗಳನ್ನು ಕೈಮೇಲೆ ಚಿಮುಕಿಸಿ, ನಂತರ ಒಂದನ್ನು ಮನಬಂದಂತೆ ಚಿಮುಕಿಸಿಕೊಂಡ. ಯಾರನ್ನೋ ಭೇಟಿಯಾಗಲಿದ್ದಾನೆಯೇ? ತಯಾರಿ ನೋಡಿದರೆ ಬರಲಿರುವ ವ್ಯಕ್ತಿ ಹೆಂಗಸಿರಬಹುದು ಎನ್ನುವ ಕಲ್ಪನೆಯಿಂದ ಶಮಿಗೆ ರೋಮಾಂಚನವಾಯಿತು. ಹನ್ನೆರಡು ವರ್ಷಗಳ ಹಿಂದೆ, ಅವನ ಪ್ರತಿಧ್ವನಿಯಂತಿದ್ದ ಹೆಂಡತಿ ಮಿಶಾ, ಯಾವ ಮೆಲೋಡ್ರಾಮಗಳಿಲ್ಲದೆ, ಡೈವೋರ್ಸೂ ಕೊಡದೇ, "ಇರಲೂ ಗೂಡು ಇರದ ನಿನ್ನೊಡನೆ ಬದುಕುವುದಾದರೂ ಹೇಗೆ? ಕ್ಷಮಿಸಿಬಿಡು" ಎಂದು ಕನಿಕರದಿಂದಲೇ ಅವನನ್ನು ಬಿಟ್ಟು ಹೋದ ಮೊದಲಲ್ಲಿ ಶಮಿ ಕಂಡ ಕನಸು ಒಂದೆರಡಲ್ಲ. ಈಗ ಬರುವ ಹೆಣ್ಣು ಯಾರಿರಬಹುದು ಮತ್ತು ಹೇಗಿರಬಹುದು ಎಂದು ಕಲ್ಪಿಸಿಕೊಳ್ಳಲು ಪ್ರಯತ್ನಿಸಿದ. ಅವನ ಹಗಲುಗನಸುಗಳಲ್ಲಿ ಕಾಡಿದ ಮುಖಗಳು, ರಾತ್ರಿ ಬಂದು ಹೆದರಿಸಿದ ರೂಪಗಳು ಕಣ್ಣಮುಂದೆ ರೂಪದರ್ಶಿಯರಂತೆ ಏನೂ ಮಾತನಾಡದೇ ದುರುಗುಟ್ಟಿ ನೋಡುತ್ತ ಹಾಯ್ದುಹೋದವು. ಶಮಿ ಆಗ ಓಡಿದ್ದರೆ ಒಳ ಉಡುಪುಗಳಲ್ಲಿದ್ದ ಅವನು ಪ್ರತಿಕ್ರಿಯಿಸುವುದು ಸಾಧ್ಯವಿರಲಿಲ್ಲ. ಆದರೆ ತನ್ನ ಸ್ವತಂತ್ರ ಪ್ರತಿಬಿಂಬದ ಲೋಲುಪತೆಯಲ್ಲಿ ಕಳೆದುಹೋದ ಶಮಿ ಉಸಿರು ಬಿಗಿಹಿಡಿದು ಅಲ್ಲಿಯೇ, ಕ್ಲಾಸೆಟ್ಟಿನ ಗಬ್ಬುನಾತವನ್ನು ಮರೆತು, ಕನ್ನಡಿಯ ಮುಂದಿನ ಅತ್ತರಿನ ಮೋಡದ ಅಮಲಿನಲ್ಲಿ ಕಳೆದುಹೋಗಿದ್ದ.

ಆತ ಬೆಡ್ ರೂಮಿಗೆ ಬಂದು ಬ್ರೀಫ್‌ಕೇಸಿನಿಂದ ಪ್ಯಾಂಟ್‌ಶರ್ಟ್ ತೆಗೆದು ಧರಿಸತೊಡಗಿದ. ಸುಕ್ಕಿರದ ತೆಳು ನೀಲಿ ಬಣ್ಣದ ಶರ್ಟ್, ಅದಕ್ಕೊಪ್ಪುವ ಕಡುಗಪ್ಪು ಬಣ್ಣದ ಪ್ಯಾಂಟ್, ಟೈ, ಶೂ... 'ಓಹ್, ಬಟ್ಟೆ ಬದಲಿಸಲು ಬಂದಿದ್ದಾನೆ, ಇನ್ನೇನು ಹೊರಹೋಗುತ್ತಾನೆ, ಈ ಕಾಯುವಿಕೆ ಯಾವ ತಿರುವುಗಳೂ ಇರದೇ ಮುಗಿದುಹೋಗುತ್ತದೆ' ಎಂಬ ನಿರಾಶೆಯೂ. ತಾನಿಂದು ಹೊರ ಹೋಗಬೇಕಿಲ್ಲ ಎಂಬ ಸಮಾಧಾನವೂ ಒಟ್ಟೊಟ್ಟಿಗೆ ಒತ್ತರಿಸಿ ಬಂದವು. ಆದರೆ ಆತ ಅಲಂಕಾರದ ಕೊನೆಯ ಹಂತವೆಂಬಂತೆ ಬ್ರೀಫ್ ಕೇಸಿನಿಂದ ಗನ್ ತೆಗೆದಾಗ ಶಮಿಯ ಮೊದಲಿನೆಲ್ಲ ಚಿತ್ರಗಳು ಚೆಲ್ಲಾಪಿಲ್ಲಿಯಾದವು.